ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Monday, the 30th March 1981 / Chaitra 9, 1903 S.E.

The House met in the Assembly Chamber, Vidhana Soudha, at Twelve of the Clock.

STARRED QUESTIONS
(To which oral answers were given)

Routes which are being operated by private persons and K S.R.T.C. in the State.

68. SRI RAMESH KUMAR (Srinivasapura).—Will the Minister for Transport and Minor Irrigation be pleased to state :—

(a) the number of routes which are being operated by private persons and the number of routes operated by Karnataka State Road Transport Corporation in the State;

(b) the total number of employees who are working with the private Operators prior to taking over buses by the K.S.R.T.C. The number of employees working in K.S.R.T.C.;

(c) the wages paid to the drivers, conductors, cleaners and helpers by the private operators and K.S.R.T.C. category-wise statistics may please be given ?

SRI M. M. J. SADYOJATHA (Minister for Transport and Minor Irrigation).—

(a) Private operators—2433
K.S.R.T.C. —4419

(b) Employees working with Private operators prior to taking over by the K.S.R.T.C. 5,300

Employees working with K.S.R.T.C. 31,512

(c) Monthly wages inclusive of DA, HRA, etc., paid by the K.S.R.T.C. in Bangalore are ;

	Drivers	Conductors	Helpers
Minimum Pay	407-70	382-50	348-50

Maximum Pay	830-20	625-00	543-60

Private operators were not adopting uniform scales of pay.

ಶ್ರೀ ರಮೇಶ್ ಕುಮಾರ್.—ಸ್ವಾಮಿ, ಇಲ್ಲಿ ಖಾಸಗಿ ಸಂಚಾಲಕರು ಒಟ್ಟು ೨೯೩೩ ಎಂದು ಹೇಳಿದ್ದಾರೆ. ಈ ಖಾಸಗಿ ಸಂಚಾಲಕರು ತಮ್ಮ ಬಸ್‌ಗಳನ್ನು ಇಂಟರ್‌ಸ್ಟೇಟ್ ಅಗ್ರಿಮೆಂಟ್ ಪ್ರಕಾರ ಮತ್ತು ರೆಸಿಪ್ರೋಕಲ್ ಅಗ್ರಿಮೆಂಟ್ ಪ್ರಕಾರ ನಮ್ಮ ನ್ಯಾಷನಲ್ ರೂಟ್‌ಗಳಲ್ಲಿಯೂ ಸಹ ಓಡಿಸುತ್ತಿರುವುದು ನಿಜವಲ್ಲವೇ ?

† ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಹೌದು, ಓಡಿಸುತ್ತಿದ್ದಾರೆ.

ಶ್ರೀ ರಮೇಶ್ ಕುಮಾರ್.—ಇಂತಹವರ ಪರ್ಮಿಟ್‌ಗಳನ್ನು ಏತಕ್ಕೆ ರದ್ದು ಮಾಡಬಾರದು ? ಏಕೆಂದರೆ, ಇವರಿಗೆ ಪರ್ಮಿಟ್ ಕೊಡುವಾಗ ನ್ಯಾಷನಲ್ ರೂಟ್‌ಗಳಲ್ಲಿ ಪ್ರಯಾಣಿಕರನ್ನು ತಮ್ಮ ಬಸ್‌ಗಳಲ್ಲಿ ಲಿಫ್ಟ್ ಮಾಡಬಾರದೆಂದು ನಿಯಮವಿದ್ದರೂ ಸಹ, ಅದನ್ನು ಸ್ಪಷ್ಟವಾಗಿ ಉಲ್ಲಂಘನೆ ಮಾಡುತ್ತಿದ್ದಾರೆ. ಇದರಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಗೆ ತೊಂದರೆಯಾಗುತ್ತಿದೆ. ಜೊತೆಗೆ ನಮ್ಮ ಸರ್ಕಾರಕ್ಕೆ ಬರುವ ಆದಾಯದಲ್ಲಿ ಕೂಡ ನಷ್ಟವಾಗುತ್ತಿದೆ. ಈ ರೀತಿ ಈ ಖಾಸಗಿ ಸಂಚಾಲಕರು ಕಾನೂನು ಉಲ್ಲಂಘನೆ ಮಾಡಿ ಹೆಚ್ಚಿನ ಹಣ ಸಂಪಾದನೆ ಮಾಡುವುದರ ಮೂಲಕ ಹಗಲು ದರೋಡೆ ಮಾಡುತ್ತಿದ್ದಾರೆಂಬುದನ್ನು ತಾವು ಒಪ್ಪುತ್ತೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಅದನ್ನು ನಾನು ಒಪ್ಪುತ್ತೇನೆ. ಈ ದಿಶೆಯಲ್ಲಿ ನಾವು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇಂತಹವರ ಬಸ್‌ಗಳ ಪರ್ಮಿಟ್‌ಗಳನ್ನು ರದ್ದು ಮಾಡುತ್ತಿದ್ದೇವೆ ಮತ್ತು ಹೆಚ್ಚಿನ ದಂಡವನ್ನು ಹಾಕುತ್ತಿದ್ದೇವೆ. ಈ ವಿಚಾರ ಸರ್ಕಾರದ ಗಮನದಲ್ಲಿದೆ.

ಶ್ರೀ ರಮೇಶ್ ಕುಮಾರ್.—ತಾವು ಪರ್ಮಿಷನ್ ಕ್ಯಾನ್ಸಲ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಎಷ್ಟು ಕೇಸುಗಳು ಉಲ್ಲಂಘನೆಯಾಗಿವೆ, ಎಷ್ಟು ಕೇಸು ರಿಜಿಸ್ಟರ್ ಆಗಿವೆ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿರಿ, ಪರ್ಮಿಷನ್ ಯಾವುದಾದರೂ ಕ್ಯಾನ್ಸಲ್ ಆಗಿದೆಯೇ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಆ ವಿವರಗಳು ನನ್ನಲ್ಲಿ ಇಲ್ಲ, ಒದಗಿಸಿಕೊಡುತ್ತೇನೆ.

ಶ್ರೀ ರಮೇಶ್ ಕುಮಾರ್.—ನಾನು ಪ್ರಶ್ನೆ ಹಾಕಿರತಕ್ಕ ಮುಖ್ಯ ಉದ್ದೇಶವೇನೆಂದರೆ, ನಮ್ಮ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟವಾಗುತ್ತಿದೆ. ಅಪರೂ ಕಾನೂನು ಉಲ್ಲಂಘನೆ ಮಾಡುತ್ತಾ ಇದ್ದಾರೆ. ಎಷ್ಟು ಕ್ಯಾನ್ಸಲ್ ಆಗಿದೆ, ಎಷ್ಟು ರಿಜಿಸ್ಟರ್ ಆಗಿದೆ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿರಿ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಎಷ್ಟು ಕ್ಯಾನ್ಸಲ್ ಆಗಿದೆ, ಎಷ್ಟು ರಿಜಿಸ್ಟರಾಗಿದೆ ಎನ್ನುವ ಡೀಟೇಲ್ಸ್ ನನ್ನ ಹತ್ತಿರ ಇಲ್ಲ, ಒದಗಿಸಿಕೊಡುತ್ತೇನೆ.

ಶ್ರೀ ರಮೇಶ್ ಕುಮಾರ್.—ಟೋಟಲ್ ಕೇಸಸ್ ಎಷ್ಟು ರಿಜಿಸ್ಟರಾಗಿದೆ, ಒಂದೇ ರೋಡಿನಲ್ಲಿ ಎರಡು, ಮೂರು ಕೇಸುಗಳನ್ನು ರಿಜಿಸ್ಟರ್ ಮಾಡಿರತಕ್ಕ ಪ್ರಸಂಗಗಳಿವೆ. ಅದ್ದರಿಂದ ಕೇಳುತ್ತಿದ್ದೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಟೋಟಲ್ ಕೇಸಸ್ ನನ್ನ ಹತ್ತಿರ ಇಲ್ಲ, ವಿವರಗಳನ್ನು ಒದಗಿಸಿಕೊಡುತ್ತೇನೆ.

---

† Indicates that remarks or speeches have not been revised by the member concerned.

MR. SPEAKER.—The Hon. Minister does not have the information. He may require a notice.

SRI K. RAMESH KUMAR.—Is it the way of giving protection to the Hon. Minister.

Allotment of Quarters to Class III and IV Government Officials Working in Bangalore.

408. SRI K. RAMBHAT (Puttur).—Will the Minister for Public Works be pleased to state :—

(a) whether it has become to the notice of the Government that the scarcity of Housing accommodation, particularly Class III and IV Government servants working in Bangalore City;

(b) if so, the number of such Government servants;

(c) whether the Government has formulated any scheme with a view to providing housing accommodation to the persons who are not having any housing accommodation;

(d) if so, when such scheme will be implemented ?

SRI KAGODU THIMMAPPA (Minister for Public Works).—

(a) Yes.

(b) 43.

(c) Government in their Order No. PWD 132 BOQ 79, dated 22-3-1980 have decided to purchase the 1000 houses proposed to be constructed by the L. I. C. of India at Jeevan Bhimanagar, Bangalore.

(d) The L.I.C. of India has been requested to complete this scheme as early as possible.

ಶ್ರೀ ಕೆ. ರಾಮಭಟ್.—ಈಗ ಜಿ.ಓ.ನಂ.ಪಿ. ಡಬ್ಲ್ಯು.ಡಿ ೧೩೨ ಬಿಒಕ್ಯೂ ೭೯ ದಿನಾಂಕ ೨೨-೩-೧೯೮೦ರ ಪ್ರಕಾರ ಕೆಲವು ನಿಯಮಗಳನ್ನು ಹಾಕಿದ್ದಾರೆ. ಆ ನಿಯಮಗಳಿಗೆ ವಿರುದ್ಧವಾಗಿ ಏನಾದರೂ ನಡೆದಿರುವುದಂ ತಮ್ಮ ಗಮನಕ್ಕೆ ಬಂದಿದೆಯೇ ? ಒಬ್ಬರು ಎನ್.ಜಿ.ಓ. ಗೆಜೆಟೆಡ್ ಹುದ್ದೆಗೆ ಹೋದರೆ ಮನೆ ಖಾಲಿ ಮಾಡಬೇಕು ಎನ್.ಜಿ.ಓ.ಳಿಗೆ ಮಾತ್ರ ಆ ಮನೆಗಳು ಇವೆ, ಅವರು ಟ್ರಾನ್ಸ್‌ಫರ್ ಆದರೆ ಊರಿಂದ ಊರಿಗೆ ಹೋದರೆ ಖಾಲಿಮಾಡಬೇಕು, ಹೌಸ್ ಬಿಲ್ಡಿಂಗ್ ಅಡ್ವಾನ್ಸ್ ತೆಗೆದುಕೊಂಡು ಸ್ವಂತ ಮನೆ ಕಟ್ಟಿದರೆ, ಅವರು ಇದ್ದಂಥ ಮನೆಗಳನ್ನು ಖಾಲಿ ಮಾಡಬೇಕು ಎನ್ನತಕ್ಕಂಥ ನಿಯಮಂಗಳು ಇದೆಯೇ, ಇದ್ದರೆ ಅದರ ಉಲ್ಲಂಘನೆ ಆಗಿದೆಯೇ?

† ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆ ಬೇರೆ. ಅವರು ಈಗ ಕೇಳುತ್ತಾ ಇರತಕ್ಕ ವಿವರ ಬೇರೆ. ಅವರು ಕೇಳಿರತಕ್ಕ ಅಂಶಗಳಿಗೆ ಪ್ರತ್ಯೇಕವಾಗಿ ನಾನು ಕಳಿಸಿ ಕೊಡುತ್ತೇನೆ.

ಶ್ರೀ ಕೆ. ರಾಮಭಟ್.—ಕ್ಲಾಸ್-೩, ಕ್ಲಾಸ್-೪ ಗೆ ಕಟ್ಟಿರತಕ್ಕ ಮನೆಗಳು ಅಧ್ಯಕ್ಷರೆ, ಏನು ಮಾಡ ಬೇಕು ಎಂದು ಗೊತ್ತಾಗಿಲ್ಲ. ಬಹಳ ಜನ ತೊಂದರೆ ಪಟ್ಟಿದ್ದಾರೆ. ಅನೇಕರಿಗೆ ಮನೆ ಸಿಕ್ಕದೆ ತೊಂದರೆ